# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - WEDNESDAY 1-6-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಮಹಾರಾಷ್ಟ್ರದಲ್ಲಿ ಸೋಯಾಬೀನ್ ನಾಟಿ ಹೆಚ್ಚಳ

ಮಹಾರಾಷ್ಟ್ರದಲ್ಲಿ ಈ ಖಾರೀಫ್ ಬೆಳೆಯಲ್ಲಿ ಹಿಂದಿನ ಖಾರೀಫ್ ಬೆಳೆಗಿಂತ 1 ಲಕ್ಷ ಹೆಕ್ಟೇರು ಹೆಚ್ಚು ಪ್ರದೇಶ (46 ಲಕ್ಷ ಹೆಕ್ಟೇರ್) ದಲ್ಲಿ ಸೋಯಾಬೀನ್ ನಾಟಿ ಮಾಡಲಾಗುತ್ತಿದೆಯೆನ್ನಲಾಗಿದೆ. ಬಿತ್ತನೆ ಸೋಯಾಬೀನ್ ದರ 2021 ರಲ್ಲಿ ರೂ.225 ಇದ್ದು ಈಗ 50ಕೆ.ಜಿ ಚೀಲದ ದರ ರೂ.3900–4350 ತನಕ ಹೆಚ್ಚಳಗೊಂಡಿದೆಯೆನ್ನಲಾಗಿದೆ.

## ಭಾರತದ ಜೋಳಕ್ಕೆ ದರ ಹೆಚ್ಚಳದಿಂದ ರಫ್ತು ಬೇಡಿಕೆ ಇಳಿಕೆ

ಅಂತರಾಷ್ಟ್ರೀಯ ಜೋಳ ದರಕ್ಕಿಂತ ಭಾರತದ ಆಂತರಿಕ ಮಾರುಕಟ್ಟೆಯ ಜೋಳ ದರ ಹೆಚ್ಚಳವಿರುವುದರಿಂದ ಭಾರತ ಜೋಳಕ್ಕೆ ರಫ್ತು ಬೇಡಿಕ ಇಳಿಕೆಯಾಗಿದೆಯೆನ್ನಲಾಗಿದೆ. ಚೈನಾ, ಬ್ರೆಜಿಲ್‌ನಿಂದ ಜೋಳ ಆಮದು ಮಾಡಲು ಒಪ್ಪಂದ ಮಾಡಿಕೊಂಡಿರುವುದರಿಂದ ಅಮೇರಿಕಾದ ಜೋಳ ಫ್ಯೂಚರ್ ದರ ಇಳಿಕೆಯಾಗಿದೆಯೆನ್ನಲಾಗಿದೆ. ಬಿಹಾರದಲ್ಲಿ ಗುಣಮಟ್ಟ ಇಳಿಕೆ ಹಾಗೂ ಬೇಡಿಕೆ ಇಳಿಕೆಯಿಂದ ಜೋಳ ದರ ಇಳಿಕೆಯಾಗಿದೆ. ಕರ್ನಾಟಕದಲ್ಲಿ ಬೇಡಿಕೆ ಹಾಗೂ ಪೂರೈಕೆ ಸಮಸ್ಥಿತಿಯಲ್ಲಿರುವುದರಿಂದ ದರ ಸ್ಥಿರವಾಗಿದೆ.

## ಬ್ರೆಜಿಲ್, ಅರ್ಜೆಂಟಿನಾಗಳಲ್ಲಿ ಸೋಯಬೀನ್ ಎಣ್ಣೆ ದರ ಇಳಿಕೆ

ಅಧಿಕ ಅರೆಯುವಿಕೆ ಹಾಗೂ ರಫ್ತು ಬೇಡಿಕೆ ಇಳಿಕೆಯ ಹಿನ್ನಡೆಯಲ್ಲಿ ಲ್ಯಾಟಿನ್ ಅಮೇರಿಕಾದ ಬ್ರೆಜಿಲ್, ಅರ್ಜೆಂಟಿನಾಗಳಲ್ಲಿ ಸೋಯಬೀನ್ ಎಣ್ಣೆ ದರ ಎಪ್ರಿಲ್ 28 ರಿಂದೀಚೆ ಸುಮಾರು 9 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಆದೇಶಗಳ ಬಯೋಡೀಸೆಲ್ ಮ್ಯಾಂಡೇಟ್ ಕೂಡಾ ಕಡಿಮೆಯಿರುವುದರಿಂದ ಸೋಯಾಬೀನ್ ಹಾಗೂ ಸೋಯಾಮೀಲ್ ಪೂರೈಕೆ ಹೆಚ್ಚಳವಾಗಿದೆಯೆನ್ನಲಾಗಿದೆ. ಚೈನಾ ಹಾಗೂ ಭಾರತದಿಂದ ರಫ್ತು ಬೇಡಿಕೆಯೂ ಇಳಿಕೆಯಾದ್ದರಿಂದ ದರ ಇಳಿಕೆಯಾಗಿದೆಯೆನ್ನಲಾಗಿದೆ.

## ಭಾರತದ ಪಾಮೆಣ್ಣೆ ಆಮದು 11 ವರ್ಷಗಳ ಕನಿಷ್ಠ ಮಟ್ಟಕ್ಕೆ

ಅಕ್ಟೋಬರ್ 31ಕ್ಕೆ ಅಂತ್ಯವಾಗುವ ಈ ಸಾಲಿನ ತೈಲವರ್ಷದಲ್ಲಿ ಭಾರತದ ಪಾಮೆಣ್ಣೆ ಆಮದು ಹಿಂದಿನ 11 ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿದು 6.7 ಮಿಲಿಯನ್ ಟನ್‌ಗಳಾಗಬಹುದೆಂದು ಅಂದಾಜಿಸಲಾಗಿದೆ. ಸೋಯಾ ಎಣ್ಣೆ ಆಮದು ತೆರಿಗೆ ರದ್ದತಿ ನಂತರ ಆಕರ್ಷಕವಾಗಿದ್ದು, ಸೋಯಾ ಎಣ್ಣೆ ಆಮದು 5.7 ಶೇಕಡಾ ಹೆಚ್ಚಳವಾಗಿ 4.5 ಮಿಲಿಯನ್ ಟನ್‌ಗಳಿಗೇರಬಹುದೆನ್ನಲಾಗಿದೆ. ಸೂರ್ಯಕಾಂತಿ ಎಣ್ಣೆ ಆಮದು ಹಿಂದಿನ ವರ್ಷದಷ್ಟಾಗಬಹುದೆನ್ನಲಾಗಿದೆ. (1.9 ಶೇಕಡಾ ಮಿಲಿಯನ್ ಟನ್‌ಗಳು) ಮೇ 1 ರಿಂದ 25 ತನಕ ಮಲೇಶ್ಯಾದ ಪಾಮೆಣ್ಣೆ ರಫ್ತು 23.9 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದ್ದು, ಉತ್ಪಾದನೆ 5ರಿಂದ 7 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಮಲೇಶ್ಯಾದ ಪಾಮೆಣ್ಣೆ ರಫ್ತು ಎಪ್ರಿಲ್ ಈ ಅವಧಿಯಲ್ಲಿದ್ದ 897,683 ಟನ್‌ಗಳಿಂದ 1,112,175 ಟನ್‌ಗಳಿಗೆ ಏರಿಕೆಯಾಗಿದೆ. ಸೋಯಾ ಬೀನ್ ಎಣ್ಣೆ ಜಾಗತಿಕ ಫ್ಯೂಚರ್ ದರ ಸ್ವಲ್ಪ ಮಟ್ಟಿನ ಹೆಚ್ಚಳ ಕಂಡಿದೆ. ಮಲೇಶೀಯನ್ ಪಾಮ್ ಎಣ್ಣೆ ಫ್ಯೂಚರ್ ದರ 0.57 ಶೇಕಡಾ ಹೆಚ್ಚಳವಾಗಿದೆ. ಉಕ್ರೈನ್ ನಿಂದ ಸೂರ್ಯಕಾಂತಿ ಎಣ್ಣೆ ರಫ್ತು ಸಾಧ್ಯತೆಯಿಂದ ಪಾಮೆಣ್ಣೆ ಫ್ಯೂಚರ್ ದರ ಇಳಿಕೆಯಾಗುವ ಸಾಧ್ಯತೆಯಿದೆ.

## ಅಕ್ಕಿ, ಗೋಧಿ , ಅಟ್ಟಾ ದರ ಇಳಿಕೆ

ಗೋಧಿ ರಫ್ತು ನಿರ್ಬಂಧದ ನಂತರ ಗೋಧಿ ಹುಡಿ, ಅಟ್ಟಾ ದರಗಳು 5 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ದೇಶೀ ಬೇಡಿಕೆ ಉತ್ತಮವಾಗಿದ್ದು ಇನ್ನು ದರ ಇಳಿಕೆಯ ಸಾಧ್ಯತೆ ಕಡಿಮೆಯೆನ್ನಲಾಗಿದೆ. ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ, ಒಡಿಸ್ಸಾ, ಛತ್ತೀಸ್‌ಗಡ್‌ಗಳಲ್ಲಿ ಹೊಸಬೆಳೆಯ ಅಕ್ಕಿ, ಆವಕವಾಗಲಾರಂಭಿಸಿರುವುದರಿಂದ ಅಕ್ಕಿ ದರವೂ ಇಳಿಕೆಯಾಗಿದೆಯೆನ್ನಲಾಗಿದ್ದು, ಉತ್ಪಾದನೆ ಹೆಚ್ಚಳವದ್ದು ದರ ಹೆಚ್ಚಳದ ಸಾಧ್ಯತೆ ಕಡಿಮೆಯೆನ್ನಲಾಗಿದೆ.